ಅನುಬಂಧ

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನ್ಯಾಯಬೆಲೆ ಅಂಗಡಿಗಳು ಹಾಗೂ ಹರಿಜನ: ಗಿರಿಜನರ ನ್ಯಾಯಬೆಲೆ ಅಂಗಡಿಗಳ ಜಿಲ್ಲಾವಾರು ಮಾಹಿತಿ ತಃಖ್ತೆ.

ಕ್ರ.ಸಂ.	ಜಿಲ್ಲೆಯ ಹೆಸರು	ನ್ಯಾಯಬೆಲೆ ಅಂಗಡಿಗಳ ಸಂಖ್ಯೆ	ಪ.ಜಾ	ಪ.ಪಂ.
1.	ಬೆಂಗಳೂರು (ಅ.ಪ)	1601	39	15
2.	ಬೆಂಗಳೂರು (ನಗರ)	445	43	4
3.	ಬೆಂಗಳೂರು (ಗ್ರಾಮಾಂತರ)	867	25	6
4.	ಬೆಳಗಾಂ	1372	28	8
5.	ಬಳ್ಳಾರಿ	612	27	18
6.	ಬೀದರ್	624	39	9
7.	ಬಿಜಾಪುರ	1336	42	7
8.	ಚಿಕ್ಕಮಗಳೂರು	483	5	1
9.	ಚಿತ್ರದುರ್ಗ	766	66	38
10.	ದಕ್ಷಿಣ ಕನ್ನಡ	896	1	1
11.	ಧಾರವಾಡ	1259	14	6
12.	ಗುಲ್ಬರ್ಗಾ	1096	3	2
13.	ಹಾಸನ	686	8	–
14.	ಕೊಡಗು	266	5	8
15.	ಕೋಲಾರ	1016	14	3
16.	ಮೈಸೂರು	1327	103	19
17.	ಮಂಡ್ಯ	649	36	7
18.	ರಾಯಚೂರು	1034	53	81
19.	ಶಿವಮೊಗ್ಗ	715	37	9
20.	ತುಮಕೂರು	864	45	12
21.	ಉತ್ತರ ಕನ್ನಡ	410	3	–
ಒಟ್ಟು		18322	636	254

ಪೆಟ್ರೋಲ್ ಕಲಬೆರಕೆಯ ಕುರಿತು

903 ಎ. ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪೆಟ್ರೋಲ್ ಕಲಬೆರಕೆ ಮತ್ತು ಅಳತೆಯಲ್ಲಿನ ಮೋಸದ ಕುರಿತು ರಾಜ್ಯದಲ್ಲಿ ಈ ವರ್ಷ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

ಆ) ಇಲಾಖೆಯ ವತಿಯಿಂದ ಎಷ್ಟು ಕಲಬೆರಕೆ ಪ್ರಕರಣಗಳನ್ನು ಉಡುಪಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಪತ್ತೆ ಮಾಡಲಾಗಿದೆ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವೆಯರು):–

ಅ) ಈ ವರ್ಷ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ವಿವಿಧ ಪೆಟ್ರೋಲ್ ಬಂಕ್‌ಗಳಿಂದ 105 ಸ್ಯಾಂಪಲ್‌ಗಳನ್ನು ಪಡೆದು ಪರೀಕ್ಷೆಗೆ ಒಳಪಡಿಸಲಾಗಿ ಇವುಗಳಲ್ಲಿ 4 ಕಲಬೆರಕೆ ಪ್ರಕರಣಗಳಾಗಿರುವುದು ಕಂಡುಬಂದಿತ್ತು. (ಒಂದು ಶಿವಮೊಗ್ಗದಲ್ಲಿ ಮತ್ತು ಮೂರು ತುಮಕೂರಿನಲ್ಲಿ). 33 ಸ್ಯಾಂಪಲ್‌ಗಳಲ್ಲಿ ಕಲಬೆರಕೆ ಕಂಡುಬಂದಿಲ್ಲ. ಮತ್ತು 68 ಸ್ಯಾಂಪಲ್‌ಗಳಿಗೆ ಸಂಬಂಧಿಸಿದಂತೆ ತಪಾಸಣಾ ವರದಿ ನಿರೀಕ್ಷಣೆಯಲ್ಲಿದೆ. ಪ್ರಸಕ್ತ ಸಾಲಿನಲ್ಲಿ ಪೆಟ್ರೋಲ್ ಕಡಿಮೆ ಅಳತೆ ನೀಡಿದ್ದಕ್ಕಾಗಿ 40ಮೊಕದ್ದಮೆಗಳನ್ನು ಹೂಡಲಾಗಿದೆ. 40ಮೊಕದ್ದಮೆಗಳ ಪೈಕಿ 38ಮೊಕದ್ದಮೆಗಳನ್ನು ಇಲಾಖೆಯಲ್ಲಿ ರಾಜಿ ಆಭಿಸಂಧಾನ ಮಾಡಿ ರೂ. 67,500.00 ಗಳ ದಂಡ ವಸೂಲಿ ಮಾಡಲಾಗಿದೆ. ಉಳಿದ ಎರಡು ಮೊಕದ್ದಮೆಗಳನ್ನು ನ್ಯಾಯಾಲಯದಲ್ಲಿ ದಾಖಲು ಮಾಡಲಾಗಿದೆ ಮತ್ತು ಇವು ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿವೆ.

ಆ) ಯಾವುದೂ ಇಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಸಾಲಿಗ್ರಾಮ ಪುರಸಭೆಯಲ್ಲಿ ರಾಜ್ಯ ಸಾರಿಗೆ ಸಂಸ್ಥೆಯವರಿಂದ ಮುಂಗಡ ಟಿಕೆಟ್ ಬುಕಿಂಗ್ ವ್ಯವಸ್ಥೆ.

902. ಶ್ರೀ ಪಿ. ಬಸವರಾಜ, (ಬ್ರಹ್ಮಾವರ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ರಸ್ತೆ ಸಾರಿಗೆ ನಿಗಮದವರು ಬೆಂಗಳೂರು ಕುಂದಾಪುರ ನಡುವೆ ಓಡಾಡುವ ಕೆಲವು ಬಸ್ಸುಗಳ ನಿಲುಗಡೆಯನ್ನು ಉಡುಪಿ ತಾಲ್ಲೂಕು ಸಾಲಿಗ್ರಾಮದಲ್ಲಿ ಕಲ್ಪಿಸಿದ್ದು ನಿಜವೆ ?

ಆ) ಆ ರೀತಿ ನಿಲುಗಡೆಯನ್ನು ಪ್ರಾಯೋಗಿಕವಾಗಿ ಸಾರಿಗೆಗಳ ಚಾಲಕರು, ನಿರ್ವಾಹಕರು ಜಾರಿಗೊಳಿಸುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಮಂಗಳೂರಿನಿಂದ ಬೈಂದೂರವರೆಗಿನ ಸುಮಾರು 135 ಕಿ.ಮಿ. ಉದ್ದದ ರಸ್ತೆಯಲ್ಲಿ ಯಾವ ಯಾವ ಕಡೆಗಳಲ್ಲಿ ಸಾರಿಗೆ ನಿಗಮದ ಕಂಟ್ರೋಲ್ ಪಾಯಿಂಟ್ ಇರುವುದು (ವಿವರ ನೀಡುವದು) ?

ಈ) ಉಡುಪಿ ತಾಲ್ಲೂಕಿನ ಸಾಲಿಗ್ರಾಮ ಪುರಸಭೆಯು ಉಚಿತ ಕೊಠಡಿಯನ್ನು ನಿಗಮಕ್ಕೆ ನೀಡಿದ್ದಲ್ಲಿ ಅಲ್ಲಿ ಕಂಟ್ರೋಲ್ ಪಾಯಿಂಟ್ ಕಲ್ಪಿಸಿ ಬುಕ್ಕಿಂಗ್ ವ್ಯವಸ್ಥೆಯನ್ನು ಪ್ರಾರಂಭ ಮಾಡಲು ಮತ್ತು ಇತರ ಸಾರಿಗೆಗಳ ನಿಲುಗಡೆಯನ್ನು ಒದಗಿಸುವ ಕುರಿತು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) – ಹೌದು –

ಆ) – ಇಲ್ಲಾ –

ಇ) ಮಂಗಳೂರು, ಕುಂದಾಪುರ, ಉಡುಪಿ ಮತ್ತು ಬೈಂದೂರು

ಈ) ಪರಿಶೀಲಿಸಲಾಗುವುದು.